(೧೧) ಬ್ರಹ್ಮಾವರದ ಅಪ್ಪಯ್ಯ ಎನ್ನುವವರನ್ನು ಕಿರಿಯ ಮಹಿಳಾ ಆರೋಗ್ಯ ಸಹಾಯಕರಾಗಿ ನೇಮಿಸಿದ ಆದೇಶವನ್ನು ರದ್ದುಗೊಳಿಸಿರುವುದು

ಶ್ರೀ ಬಸವರಾಜ್ (ಬ್ರಹ್ಮಾವರ).—ಸನ್ಮಾನ್ಯ ಅಧ್ಯಕ್ಷರೇ, ನನ್ನ ಮಂತದಾರ ಕ್ಷೇತ್ರವಾದ ಬ್ರಹ್ಮಾವರದ ಅಪ್ಪಯ್ಯ ಎನ್ನುವವರಿಗೆ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯಾಗಿ ದಿನಾಂಕ ೨೮-೫-೮೭ ರಂದು ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ಎ.ಎಸ್.ಎಂ. (೧) ೧೦೭-೮೭-೮೮ರ ಪ್ರಕಾರ ನೇಮಕಾತಿಯನ್ನು ಮಾಡಿರುತ್ತಾರೆ. ಆದರೆ ಅವರ ನೇಮಕಾತಿಯನ್ನು ಮುಂದಿನ ಆದೇಶ ಬರುವವರೆಗೆ ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ ಎಂದು ದಿನಾಂಕ: ೮-೭-೮೭ರಂದು ತಿಳಿಸಿರುತ್ತಾರೆ. ಇದಕ್ಕೆ ಕಾರಣವೇನು ಮತ್ತು ಈ ದಿನದವರೆಗೂ ಪುನರ್ ನೇಮಕದ ಆಜ್ಞೆ ಬಂದಿರುವುದಿಲ್ಲ. ಆದುದರಿಂದ ಕೂಡಲೇ ನೇಮಕಾತಿ ಆಜ್ಞೆಯನ್ನು ಹೊರಡಿಸಬೇಕೆಂದೂ ನಿಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೫೬ ಕಿರಿಯ ಮಹಿಳಾ ಆರೋಗ್ಯ ಸಹಾಯಕರ ಹುದ್ದೆಗಳು ಮಂಜೂರಾಗಿದ್ದು (ಎ.ಎನ್.ಎಂ.) ಅವುಗಳ ಪೈಕಿ ೫೧ ಹುದ್ದೆಗಳನ್ನು ಈಗಾಗಲೇ ತುಂಬಲಾಗಿದೆ. ಉಳಿದ ೫ ಹುದ್ದೆಗಳು ಖಾಲಿ ಇರುತ್ತವೆ. ಹಿರಿಯ ಮಹಿಳಾ ಆರೋಗ್ಯ ಸಹಾಯಕರ ಹುದ್ದೆಗಳು ೭೮ ಮಂಜೂರಾಗಿದ್ದು ಆ ಎಲ್ಲಾ ಹುದ್ದೆಗಳನ್ನು ತುಂಬಲಾಗಿದೆ. ಆದರೆ ಸೂಚನೆಯಲ್ಲಿ ಕೊಟ್ಟಿರುವ ಬ್ರಹ್ಮಾವರದ ಅಯ್ಯಪ್ಪ ಎಂಬುವರ ಪೂರ್ಣ ವಿವರಗಳು ನೀಡದೇ ಇರುವುದರಿಂದ ಅವರು ಎಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ ಮತ್ತು ಎಷ್ಟು ವರ್ಷ ಸೇವೆ ಸಲ್ಲಿಸಿದ್ದಾರೆ ಎಂಬುವುದರ ಬಗ್ಗೆ ವಿವರಗಳನ್ನು ಪಡೆದು ನಿಯಮಗಳ ಪ್ರಕಾರ ಖಾಯಂ ಗೊಳಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(೧೨) ಪುತ್ತೂರಿನಲ್ಲಿ ಸರ್ಕಾರಿ ಪದವೀಧರರ ಕಾಲೇಜನ್ನು ಪ್ರಾರಂಭಿಸುವುದು

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು),—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು, ಪುತ್ತೂರು ಪಟ್ಟಣದಲ್ಲಿ ಒಂದು ಸರ್ಕಾರಿ ಪದವೀಧರ ಕಾಲೇಜು ಪ್ರಾರಂಭಿಸುವ ಬಗ್ಗೆ ಕಳೆದ ಎರಡು ಸಲ, ಸದನದಲ್ಲಿ ಹಾಗೂ ಸಂಬಂಧಪಟ್ಟ ಮಂತ್ರಿಗಳಲ್ಲಿ ಪದೇ ಪದೇ ಒತ್ತಾಯ ತಂದರೂ ಇಷ್ಟರತನಕ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಪುತ್ತೂರು ತಾಲ್ಲೂಕು ಸಬ್ ಡಿವಿಜನ್ ಸೆಂಟರ್ ಆಗಿದ್ದು, ಆಸುಪಾಸಿನ ರೈತರ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಹೆಚ್ಚಿಗೆ ಸಂಖ್ಯೆಯಲ್ಲಿ ಪಟ್ಟಣಕ್ಕೆ ಬರುತ್ತಿದ್ದರೂ ಪದವೀಧರ ಸರ್ಕಾರಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಪಡೆಯುವಂತಹ ಅವಕಾಶ ಇಲ್ಲದೆ ಹೋಗಿದೆ. ಆದುದರಿಂದ ಈ ಪ್ರಸ್ತಾವವು ಯಾವ ಹಂತದಲ್ಲಿದೆ, ಎಲ್ಲದೆ ಈ ಒಂದು ಪುತ್ತೂರು ಜನತೆಯ ಬೇಡಿಕೆಯನ್ನು ಕೂಡಲೇ ಈಡೇರಿಸುವರೇ ಎಂಬುದಾಗಿ ತಮ್ಮ ಮುಖಾಂತರ ಸರ್ಕಾರವನ್ನು ಕೇಳಬಯಸುತ್ತೇನೆ.

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಪ್ರಥಮದರ್ಜೆ ಕಾಲೇಜನ್ನು ಪ್ರಾರಂಭಿಸಬೇಕೆಂದು ಯಾವುದೆ ಶಾಸಕರಿಂದಾಗಲೀ, ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಿಂದಾಗಲೀ, ಕಳೆದ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಅಥವಾ ಪ್ರಸಕ್ತ ವರ್ಷದಲ್ಲಾಗಲೀ ಪ್ರಸ್ತಾವನೆ ಬಂದಿರುವುದಿಲ್ಲ.

ಆದಕಾರಣ ೧೯೮೭ ೮೮ರ ಸಾಲಿನಲ್ಲಿ ಪ್ರಥಮದರ್ಜೆ ಕಾಲೇಜುಗಳಿಗೆ ಮಂಜೂರಾತಿ ನೀಡಿದ ಆದೇಶದ ಪಟ್ಟಿಯಲ್ಲಿ ಪುತ್ತೂರು ಸೇರಿಲ್ಲ. ಪ್ರಸ್ತಾವನೆ ಬಂದರೆ ಮುಂದಿನ ವರ್ಷದ ಸಾಲಿಗೆ ಪರಿಶೀಲಿಸಬಹುದು.

(೧೩) ಸರ್ಕಾರಿ ಸೇವೆ ಹಾಗೂ ಸಾರ್ವಜನಿಕ ಉದ್ದಿಮೆಗಳಲ್ಲಿ ಉದ್ಯೋಗ ಒದಗಿಸುವಲ್ಲಿ ಅಸಮಾನತೆಯನ್ನು ನಿವಾರಿಸಲು ನೇಮಿಸಿದ ಸಮಿತಿಯ ತಾತ್ಕಾಲಿಕ ವರದಿಯನ್ನು ಅಂಗೀಕರಿಸುವುದು

ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಸೇವೆಯಲ್ಲಿ ಹಾಗೂ ಸಾರ್ವಜನಿಕ ಉದ್ದಿಮೆಗಳಲ್ಲಿ ಉದ್ಯೋಗ ಒದಗಿಸುವಲ್ಲಿ ಮತ್ತು